ದಿಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರ ಪರ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನ್ನ ಮಾಹಿತಿ ಪ್ರಕಾರ ಸತ್ಯ ಮತ್ತು ಸರಿಯಾಗಿರುತ್ತವೆ . ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**ನಾನು ಈ ಅರ್ಜಿಯಲ್ಲಿ ದಾಖಲೆಗಳನ್ನು ಹಾಜರ ಪಡಿಸಿದ್ದು,**

1) ನಗರಸಭೆ ಕಾರ್ಯಾಲಯ ಶಹಾಬಾದ ಇವರು ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರು ನೀಡಿರುವ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.-1 ಎಂದು ನಿಶಾನೆಗೊಳಿಸಲಾಯಿತು.
2) ಬಿಂದು ಡೈಯಾಗ್ನಾಸ್ಟಿಕ ಇವರು ನೀಡಿರುವ ವರದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-2 ಎಂದು ನಿಶಾನೆಗೊಳಿಸಲಾಯಿತು.
3) ಫಿಜಿಶಿಯನ ವರದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-3 ಎಂದು ನಿಶಾನೆಗೊಳಿಸಲಾಯಿತು.
4) ಶಾಲಿನಿ ಐಕೇರ ಇವರು ನೀಡಿರುವ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-4 ಎಂದು ನಿಶಾನೆಗೊಳಿಸಲಾಯಿತು.

5) ಸಮುದಾಯ ಆರೋಗ್ಯ ಕೇಂದ್ರ ಇವರು ನೀಡಿರುವ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-5 ಎಂದು ನಿಶಾನೆಗೊಳಿಸಲಾಯಿತು.

6) ಜಾಧವ ಕ್ಲಿನೀಕ ದಿಂದ ಪಡೆದಿರುವ ಎರಡು ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಏಕಕಾಲಕ್ಕೆ ನಿಡಿ-6 ಎಂದು ನಿಶಾನೆಗೊಳಿಸಲಾಯಿತು.
7) ಸಂಜೀವಿನಿ ಕ್ಲಿನಿಕ ಇವರು ನೀಡಿರುವ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-7 ಎಂದು ನಿಶಾನೆಗೊಳಿಸಲಾಯಿತು.
8) ಎಮ್.ಕೆ.ಜುವೆಲರ್ಸ ಇವರ ಅಂಗಡಿಯಿಂದ ನೀಡಿರುವ ರಸೀದಿಯನ್ನು ಹಾಜರುಪಡಿಸಿದ್ದು, ಏಕಕಾಲಕ್ಕೆ ನಿಡಿ-8 ಎಂದು ನಿಶಾನೆಗೊಳಿಸಲಾಯಿತು.
9) ಶಾಲಿನಿ ಐಕ್ಲಿನಿಕ ಇವರು ನೀಡಿರುವ ರೆಫೆರಲ್ ಸ್ಲಿಪನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-9 ಎಂದು ನಿಶಾನೆಗೊಳಿಸಲಾಯಿತು.
10) ಸದರಿ ಶಾಲಿನಿ ಐಕೇರ ಇವರು ನೀಡಿರುವ ಎರಡು ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾರೆ ನಿಡಿ-10 ಎಂದು ನಿಶಾನೆಗೊಳಿಸಲಾಯಿತು.
11) ಚನ್ನಬಸವೇಶ್ವರ ಗುರುಕುಲ ಪಬ್ಲಿಕ ಶಾಲೆ ಇವರು ನೀಡಿರುವ ರಸೀದಿಯ ಎರಡು ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಏಕಕಾಲಕ್ಕೆ ನಿಡಿ-11 ಎಂದು ನಿಶಾನೆಗೊಳಿಸಲಾಯಿತು.
12) ಯು.ಎಮ್.ಇ. ಪ್ರೈಮರಿ ಸ್ಕೂಲ ಇವರು ನೀಡಿರುವ ಎರಡು ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಏಕಕಾಲಕ್ಕೆ ನಿಡಿ-12 ಎಂದು ನಿಶಾನೆಗೊಳಿಸಲಾಯಿತು.

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದ**

ನಾನು ಬಿ.ಎಸ್.ಎನ್.ಎಲ್. ಕಛೇರಿಯಲ್ಲಿ ಕಳೆದ 40 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ. ನಾನು 34 ವರ್ಷಗಳ ಹಿಂದೆ ಮದುವೆ ಆಗಿರುತ್ತೇನೆ. ಅರ್ಜಿದಾರಳ ಸಹೋದರಿಯು ನಮ್ಮ ಮನೆಗೆ ಬಂದು ವಾಸ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ನಾನು ಅರ್ಜಿದಾರಳ ಸಹೋದರಿಯನ್ನು ಮದುವೆಯಾಗಿದ್ದು ಇರುತ್ತದೆ ಎಂದರೆ ಸರಿ. ಸದರಿ ಮದುವೆಯನ್ನು ಅರ್ಜಿದಾರಳೇ ಮಾಡಿರುತ್ತಾಳೆ.

ಅರ್ಜಿದಾರಳಿಗೆ ಎರಡು ಜನ ಮಕ್ಕಳಿರುತ್ತಾರೆ. ನಾನು ಅರ್ಜಿದಾರಳ ತಂಗಿಯನ್ನು 30 ವರ್ಷಗಳ ಹಿಂದೆ ಮದುವೆ ಆಗಿರುತ್ತೇನೆ. ಅರ್ಜಿದಾರಳ ಜೊತೆ ಮದುವೆಯಾದ ನಂತರ ನಾನು ಶಹಾಬಾದನಲ್ಲೆ ವಾಸ ಮಾಡುತ್ತಿದ್ದೆ. ಶಹಾಬಾದ ದಿಂದ ವರ್ಗಾವಣೆಯಾದ ಬಳಿಕ ನಾವು ಯಾವ ಜಾಗಕ್ಕೆ ಹೋಗಿರುವುದಿಲ್ಲ. ಸಾಕ್ಷಿದಾರರು ನಾನು ಮಾತ್ರ ಬೇರೆ ಕಡೆ ಹೋಗಿದ್ದೆ ಎಂದು ಉತ್ತರಿಸುತ್ತಾರೆ. ಚಿತ್ತಾಪೂರದ ನ್ಯಾಯಾಲಯದಲ್ಲಿ ಅರ್ಜಿದಾರಳ ಸಹೋದರಿಯು ಪಾಲು ವಾಟ್ನಿ ದಾವೆ ಹೂಡಿರುತ್ತಾಳೆ ಎಂದರೆ ಸರಿ.

ಸದರಿ ಅರ್ಜಿದಾರಳಿಗೆ ನೀನು ಸಹ ಒಂದು ಪಾಲು ವಾಟ್ನಿ ದಾವೆ ಹಾಕು

ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿವೃತ್ತಿಯಾದ ನಂತರ ಎಷ್ಟು ಹಣ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅವಳ ಕಾಟಕ್ಕೆ ವಿ.ಆರ್.ಎಸ್. ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಅರ್ಜಿದಾರಳಿಗೆ ದುಡ್ಡು ಕೊಡುವುದು ಬರುತ್ತದೆ ಎಂದು ವಿ.ಆರ್.ಎಸ್. ನೀಡಿರುತ್ತೀರಿ ಎಂದರೆ ಸರಿಯಲ್ಲ.

ಅರ್ಜಿದಾರಳ ಸಹೋದರಿಯನ್ನು ಮದುವೆಯಾದ ಬಳಿಕ ಅರ್ಜಿದಾರಳಿಗೆ ನಾನು ವಿನಾಕಾರಣ ಕಿರುಕುಳ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಅಸಂಬದ್ಧವಾಗಿ ಕಟಕಟೆ ಒಳಗೆ ನಿಂತು ಕುಣಿಯುವ ಹಾಗೆ ಮಾಡುತ್ತಿದ್ದರು ಇದನ್ನು ನೋಡಿ ನ್ಯಾಯಾಲಯವು ಸಾಕ್ಷವನ್ನು ತೆಗೆದುಕೊಳ್ಳುವ ಸಮಯದಲ್ಲಿ ನಮೂದು ಮಾಡಿಕೊಂಡಿದ್ದು ಇರುತ್ತದೆ.

ಅರ್ಜಿದಾರಳಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಸದರಿಯವರ ಮದುವೆಯನ್ನು ಅರ್ಜಿದಾರಳೇ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ವಿವಾಹವಾಗಿರುವ ಕುರಿತು ಅರ್ಜಿದಾರಳು ಸಾಲವನ್ನು ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಎಲ್ಲ ವಿವಾಹದ ವೆಚ್ಚವನ್ನು ನಾನೇ ಭರಿಸಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ತಿಂಗಳಿಗೆ ರೂ.30-35 ಸಾವಿರ ರೂಪಾಯಿಗಳ ಪಿಂಚಣಿ ಹಣವು ಬರುತ್ತದೆ. ನನಗೆ ಸ್ವಂತ ಮನೆ ಇರುತ್ತದೆ ಎಂದರೆ ಸರಿ. ಅರ್ಜಿದಾರಳಿಗೆ 57 ವರ್ಷಗಳಾಗಿರುತ್ತವೆ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಅರ್ಜಿದಾರಳು ಈಗ ತವರುಮನೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹಲವಾರು ಬಾರಿ ನಮ್ಮ ಸಂಸಾರವನ್ನು ಸುಧಾರಿಸಲು ಪಂಚಾಯತಿ ನಡೆದಿದ್ದು ಇರುತ್ತದೆ ಎಂದರೆ ಸರಿ. ನನ್ನ ಎರಡನೇ ಹೆಂಡತಿಯ ಮಾತನ್ನು ಕೇಳಿ ನಾನು ಪಂಚಾಯತಿಯವರ ಮಾತನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಎರಡನೇ ಹೆಂಡತಿ ಮತ್ತು ನಾನು ಅರ್ಜಿದಾರಳಿಗೆ ಮಾನಸಿಕ ಹಿಂಸೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.1 ರ ಮೇಲೆ ಅರ್ಜಿದಾರಳ ಸಹಿ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರಳು ಸಹಿ ಹಾಗೂ ಹೆಬ್ಬಟ್ಟನ್ನು ಹಾಕುತ್ತಾರೆ ಎಂದು ನುಡಿಯುತ್ತಾರೆ. ದೃಢೀಕರಣ ಪ್ರ.ಪತ್ರವು ನನಗೆ ಸಂಬಂಧ ಇಲ್ಲದ ದಾಖಲೆ ಆಗಿರುತ್ತದೆ, ಅದನ್ನು ನಾನು ಹಾಜರುಪಡಿಸಿರುವುದಿಲ್ಲ.

ಬಿಂದು ಡೈಯಾಗ್ನಿಟೀಸ್ ಲ್ಯಾಬರೆಟರಿಗೆ ಯಾವಾಗ ಹೋಗಿ ತೋರಿಸಿಕೊಂಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಿ.ಡಿ.3 ರ ಪ್ರಕಾರ ನಾನು ಸುಮಾರು 3-4 ವರ್ಷಗಳ ಹಿಂದೆ ಡಾ. ಕೆ.ವಿಜಯ ಮೋಹನ ಇವರ ಆಸ್ಪತ್ರೆಗೆ ಹೋಗಿದ್ದು ಇರುತ್ತದೆ. ನಾನು ಶಾಲಿನಿ ಐಕೇರ ಸೆಂಟರಗೆ ಪೊರೆಯಾಗಿರುವ ಕಾರಣ ಆಪರೇಷನ್ ಮಾಡಿಸಲು ಹೋಗಿದ್ದು ಇರುತ್ತದೆ.

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಎಲ್ಲರೂ ಚಿರಪರಿಚಿತಸ್ಥರು

ಎಂದರೆ ಸರಿ. ನಿ.ಡಿ.6 ರಪ್ರಕಾರ ಜಾಧವ ಕ್ಲಿನಿಕ ಗೆ 2025 ರಲ್ಲಿ ಹೋಗಿದ್ದು ಇರುತ್ತದೆ. ನಿ.ಡಿ.6 ರ ಮೇಲೆ ಯಾವುದೇ ದಿನಾಂಕ ಬರೆದಿರುವುದಿಲ್ಲ ಎಂದರೆ ಸರಿ. ನಿ.ಡಿ.7 ಶಹಾಬಾದನಲ್ಲಿ ತೋರಿಸಿರುವ ವೈದ್ಯರ ರಸೀದಿ ಆಗಿರುತ್ತದೆ. ಸದರಿ ರಸೀದಿಯ ಮೇಲೆ ಯಾವುದೇ ದಿನಾಂಕ ಅಥವಾ ವರ್ಷವಾಗಲೀ ಇರುವುದಿಲ್ಲ. ನಿ.ಡಿ.8 ರ ಪ್ರಕಾರ ನಾನು ಖರೀದಿ ಮಾಡಿರುವ ಬಂಗಾರ ಪಡೆದುಕೊಂಡಿರುವ ಕುರಿತು ರಸೀದಿ ಆಗಿರುತ್ತವೆ ಎಂದರೆ ಸರಿ.

ಸದರಿ ರಸೀದಿಯು ಅನ್ನಪೂರ್ಣ ಇವರಿಗೆ ಸಂಬಂಧಪಟ್ಟ ರಸೀದಿ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.11 ಅನ್ನಪೂರ್ನ ಇವರಿಗೆ ಜನಿಸಿರುವ ಮಕ್ಕಳ ಶಾಲಾ ರಸೀದಿಯಾಗಿರುತ್ತವೆ. ಯು.ಎಮ್.ಇ ಸ್ಕೂಲ ಶಹಾಬಾದನಲ್ಲು ಸಹ ಅವರೇ ವ್ಯಾಸಾಂಗ ಮಾಡುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ಹಣವನ್ನು ನೀಡಬಾರದು ಎಂಬ ಉದ್ದೇಶದಿಂದ ನಾನು ನಿ.ಡಿ.1 ರಿಂದ 12 ರಂತೆ ದಾಖಲೆಗಳನ್ನು ಸೃಷ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳಿಗೆ ಪೊಟಗಿ ಹಣವನ್ನು ನೀಡಲು ಬಾದ್ಯಸ್ತನಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿದಾರಳು ಯಾವುದೇ ಹಣ ಮತ್ತು ಬಂಗಾರವನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧಿಕಾರಿಗಳು, ಶಹಾಬಾದ